9. Supply of Agricultural inputs and distribution of input kits at subsidised rates and free of cost to small and marginal farmers and to Scheduled Caste and Scheduled Tribe farmers through special schemes.

4. Does not arise.

ದ್ವಿತೀಯ ಹಂತದ ಕಾಳಿ ಜಲವಿದ್ಯುತ್ ಯೋಜನೆಯಲ್ಲಿ ಮುಳುಗಡೆಯಾದ ಜನರಿಗೆ ಪುನರ್ವಸತಿ

1305 - ಶ್ರೀ ಪ್ರಭಾಕರ ರಾಣೆ (ಕಾರವಾರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಳಿ ಜಲ ವಿದ್ಯುತ್ ಯೋಜನೆಯ ಸುಪಾ ಡ್ಯಾಂನ ದ್ವಿತೀಯ ಹಾಗೂ ತೃತೀಯ ಹಂತದಲ್ಲಿ ಮುಳುಗಡೆಯಾದ ಜನರಿಗೆ ಪುನರ್‌ವಸತಿ ಮಾಡದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಜನರಿಗಾಗಿ ನಿರ್ದಿಷ್ಟ ಪಡಿಸಿದ ಪುನರ್‌ವಸತಿ ಕೇಂದ್ರಗಳಾದ ಜೋಯಿಡ ಮತ್ತು ಕ್ಯಾಸಲ್‌ರಾಕ್‌ಗಳಲ್ಲಿ ಯಾವುದೇ ಪ್ರಥಮ ಸೌಲಭ್ಯಗಳನ್ನು ಈವರೆಗೂ ಒದಗಿಸದೇ ಇರುವುದಕ್ಕೆ ಕಾರಣವೇನು?

ಇ) ದಾಂಡೇಲಿಯ ವಿಶೇಷ ಭೂಸ್ವಾಧೀನ ಅಧಿಕಾರಿ ಇವರ ಕಛೇರಿಯಲ್ಲಿನ ಭ್ರಷ್ಟಾಚಾರದಿಂದಾಗಿ ನಿರಾಶ್ರಿತರಿಗೆ ಹೆಚ್ಚುವರಿ ಪರಿಹಾರ ಹಾಗೂ ಪುನರ್‌ವಸತಿ ಅನುದಾನ ನೀಡುವಲ್ಲಿ ಆಗುತ್ತಿರುವ ಕಿರುಕುಳದ ಬಗ್ಗೆ ಸರಕಾರಕ್ಕೆ ದೂರು ಬಂದಿದೆಯೇ?

ಈ) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಎಲ್ಲಾ ನಿರಾಶ್ರಿತ ಕುಟುಂಬದವರಿಗೂ ಕೆಲವು ಪ್ರಥಮ ಸೌಕರ್ಯಗಳನ್ನು ಒದಗಿಸಲಾಗಿದೆ.

ಆ) ಹೆಚ್ಚುವರಿ ನಾಗರೀಕ ಸೌಕರ್ಯಗಳನ್ನು ಕರ್ನಾಟಕ ವಿದ್ಯುತ್ ನಿಗಮದವರೊಡನೆ ಚರ್ಚಿಸಿ ನೀಡಲಾಗುವುದು.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಲಾಲ್‌ಬಾಗ್ ಉದ್ಯಾನವನ ಸುಧಾರಣೆ ವೆಚ್ಚ

1243 - ಶ್ರೀ ಸಾದತ್ ಅಲಿ ಖಾನ್ (ಚಿನ್ನಪಟ್ಟಣ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಲ್ಲಿ ಲಾಲ್‌ಬಾಗ್‌ಗಾಗಿ ಸರ್ಕಾರವು ಮಾಡಿದ ವೆಚ್ಚವೆಷ್ಟು?

ಆ) ಲಾಲ್‌ಬಾಗ್ ಉದ್ಯಾನವನ ಸುಧಾರಣಾ ವೆಚ್ಚವನ್ನು ಹೆಚ್ಚಿಸುವ ಉದ್ದೇಶವಿದೆಯೇ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) 1988-89 ರೂ. 35.74 ಲಕ್ಷ
1989-90 ರೂ. 57.67 ಲಕ್ಷ
(ಗಾಜಿನ ಮನೆ ಶತಮಾನೋತ್ಸವ ವೆಚ್ಚ ಸೇರಿ)

ಆ) ಇಲ್ಲ.